ಆ) ಹಾಗಿದ್ದಲ್ಲಿ, ಕೂಡಲೇ ಕ್ರಮ ಕೈಗೊಂಡು ಕೆಲಸ ಮಾಡಿಸಲಾಗುತ್ತದೆಯೇ;

ಇ) ಈ ವರ್ಷದ ಆಯವ್ಯಯದಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದೇ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಬಂದಿದೆ. ತುರುವೇಕೆರೆ ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಯಡಿಯೂರು-ತಿಪಟೂರು ರಸ್ತೆಯಲ್ಲಿ ಚರಂಡಿ ವ್ಯವಸ್ಥೆ ಇರುವುದಿಲ್ಲ. ಸದರಿ ರಸ್ತೆಯು ರಾಜ್ಯ ಹೆದ್ದಾರಿ ಮುಖ್ಯ ರಸ್ತೆಯಾಗಿದ್ದು ಈ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ವತಿಯಿಂದ ಮಾಡಿಸಬೇಕಾಗಿರುತ್ತದೆ.

ಆ) ಸದರಿ ಜಾಗದಲ್ಲಿ ಚರಂಡಿ ವ್ಯವಸ್ಥೆ ಇಲ್ಲದೇ ಇರುವುದರಿಂದ ಪಟ್ಟಣ ಪಂಚಾಯಿತಿ ವತಿಯಿಂದ ತಾತ್ಕಾಲಿಕವಾಗಿ ಕಾಲುವೆ ಚರಂಡಿ ಮಾಡಿ ರಸ್ತೆಗೆ ನೀರು ಹರಿಯುವುದನ್ನು ನಿಲ್ಲಿಸಿ ರಸ್ತೆ ಹಾಳಾಗುವುದನ್ನು ತಡೆಗಟ್ಟಿದೆ.

ಇ) ಸದರಿ ಯಡಿಯೂರು-ತಿಪಟೂರು ರಸ್ತೆಯಲ್ಲಿ ಬಾಕ್ಸ್ ಚರಂಡಿ ನಿರ್ಮಾಣಕ್ಕೆ ಸುಮಾರು ರೂ. 3-00 ಕೋಟಿಗಳ ವೆಚ್ಚವಾಗುತ್ತದೆಂದು ಅಂದಾಜಿಸಲಾಗಿದೆ. ತುರುವೇಕೆರೆ ಪಟ್ಟಣ ಪಂಚಾಯತಿಯ ಆದಾಯದಲ್ಲಿ ಸದರಿ ಕಾಮಗಾರಿಯನ್ನು ಸಧ್ಯಕ್ಕೆ ಕೈಗೊಳ್ಳಲು ಸಾಧ್ಯವಾಗದಿರುವುದರಿಂದ, ಹಂತ ಹಂತವಾಗಿ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಕುಂಬಾರ ಜನಾಂಗದ ಸ್ಥಿತಿಗತಿ

822 (1066) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅತ್ಯಂತ ಹಿಂದುಳಿದಂತಹ ಸಾಂಪ್ರದಾಯಿಕ ಕುಲ ಕಸುಬನ್ನು ಅವಲಂಬಿಸಿರುವ ಕುಂಬಾರ ಜನಾಂಗದ ಸಂಖ್ಯೆ ಎಷ್ಟು;

ಆ) ರಾಜ್ಯದ ಯಾವ ಜಿಲ್ಲೆಗಳಲ್ಲಿ ಈ ಜನಾಂಗದವರು ಹೆಚ್ಚು ವಾಸಿಸುತ್ತಿದ್ದಾರೆ;

ಇ) ಈ ಜನಾಂಗದ ಶೈಕ್ಷಣಿಕ ಆರ್ಥಿಕ ಸಾಮಾಜಿಕ, ರಾಜಕೀಯ ಸ್ಥಾನ ಮಾನಗಳೇನು; (ವಿವರ ನೀಡುವುದು)

ಉ) ಈ ಜನಾಂಗದವರಿಗೆ ಯಾವ ಹಂತದ ಮೀಸಲಾತಿ ಸೌಲಭ್ಯ ನೀಡಲಾಗಿದೆ? (ಯಾವ ವರ್ಗದಲ್ಲಿ ಮತ್ತು ಮೀಸಲಾತಿ ಪ್ರಮಾಣವೆಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಕುಂಬಾರ ಜನಾಂಗದ ಜನ ಸಂಖ್ಯೆಯು 2ನೇ ಹಿಂದುಳಿದ ವರ್ಗಗಳ ಆಯೋಗವು 1989ಕ್ಕೆ ಅಂದಾಜಿಸಿರುವ ಪ್ರಕಾರ ರಾಜ್ಯದಲ್ಲಿ ಕುಂಬಾರ ಜನಾಂಗದ ಜನ ಸಂಖ್ಯೆ 2.79 ಲಕ್ಷ ಇರುತ್ತದೆ.

ಆ) ರಾಜ್ಯದ ದಕ್ಷಿಣ ಕನ್ನಡ, ಮೈಸೂರು, ಮಂಡ್ಯ, ಬೆಂಗಳೂರು, ರಾಯಚೂರು, ಗುಲ್ಬರ್ಗಾ, ತುಮಕೂರು, ಬೆಳಗಾಂಗಳಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದಾರೆ.

ಇ) 3ನೇ ಹಿಂದುಳಿದ ವರ್ಗಗಳ ಆಯೋಗದ ವರದಿ ಪ್ರಕಾರ ಕುರುಬರ ಜನಾಂಗದಲ್ಲಿ ಶೇ 70ರಷ್ಟು ಅನಕ್ಷರಸ್ಥರಿರುತ್ತಾರೆ.

ಆದೇಶ ಸಂ: ಸಕಇ/ 150/ ಬಿಸಿಎ/ 94 ದಿನಾಂಕ 17-09-1994ರ ಅನ್ವಯ ಕುಂಬಾರ ಜನಾಂಗವನ್ನು ಹಿಂದುಳಿದ ವರ್ಗಗಳ ಪ್ರವರ್ಗ-2ಎ ಪಟ್ಟಿಯಲ್ಲಿ ಈ ಜನಾಂಗವನ್ನು ಸೇರಿಸಿದ್ದು, ಪ್ರವರ್ಗ 2ಎ ಕ್ಕೆ ನೀಡಿರುವ ಮೀಸಲಾತಿಯಲ್ಲಿ ಈ ಜನಾಂಗದವರು ಕೂಡ ಸೌಲಭ್ಯ ಪಡೆಯಬಹುದಾಗಿದೆ.

ಈ) ಪ್ರಶ್ನೆ ಸಂಖ್ಯೆ 3ರಲ್ಲಿ ತಿಳಿಸಿರುವ ಉತ್ತರ ಅನ್ವಯಿಸುವುದು.

ಹರಿಜನ ಗಿರಿಜನ ಅಭಿವೃದ್ಧಿ ನಿಗಮ ಶಾಖೆಯಲ್ಲಿ ತಾರತಮ್ಯ ಮತ್ತು ಅಕ್ರಮ

823 (1043) ಶ್ರೀ ಜೆ. ಡಿ. ನಾಯಕ್ (ಭಟ್ಕಳ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಕಾರವಾರ ಹರಿಜನರ/ ಗಿರಿಜನರ ಅಭಿವೃದ್ಧಿ ನಿಗಮದ ಶಾಖೆಯಲ್ಲಿ 1999-2000 ಸಾಲಿನಲ್ಲಿ ಜನರಿಗೆ ಸಬ್ಸಿಡಿ ನೀಡುವಲ್ಲಿ ಹಾಗೂ ಸಾಲ ನೀಡುವಲ್ಲಿ ಆದ ತಾರತಮ್ಯ ಹಾಗೂ ಅಕ್ರಮ ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಸದ್ರಿ ವಿಷಯದಲ್ಲಿ ಮೂಡಗೋಡಿನ ವರದಾ ಗ್ರಾಮೀಣ ಬ್ಯಾಂಕಿನಲ್ಲಿ ನಡೆದ ವಂಚನೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸದ್ರಿ ವಿಷಯದಲ್ಲಿ ವಿವರಗಳನ್ನು ಒದಗಿಸುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1999-2000ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ಯೋಜನೆಯಡಿ 344 ಫಲಾನುಭವಿಗಳಿಗೆ ಸಹಾಯಧನವನ್ನು ಹಾಗೂ ಐ.ಎಸ್.ಬಿ. ಯೋಜನೆಯಡಿಯಲ್ಲಿ 40 ಜನರಿಗೆ ಅಂಚಿನ ಹಣವನ್ನು ಬಿಡುಗಡೆ ಮಾಡಲಾಗಿದೆ. ಇದಲ್ಲದೆ ಸ್ವಚ್ಛತಾ ಕಾರ್ಮಚಾರಿ ಯೋಜನೆಯಡಿ 65 ಜನರಿಗೆ ಸಾಲವನ್ನು ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಯಾವುದೇ ತಾರತಮ್ಯ ಹಾಗೂ ಅಕ್ರಮವಾಗಿರುವುದಿಲ್ಲ. ಈ ಬಗ್ಗೆ ಫಲಾನುಭವಿಗಳಿಂದಾಗಲಿ, ಜನಪ್ರತಿನಿಧಿಯಿಂದಾಗಲಿ ಯಾವುದೇ ದೂರು ಬಂದಿರುವುದಿಲ್ಲ.

ಆ),ಇ) ಸದರಿ ವಿಷಯದಲ್ಲಿ ಯಾವುದೇ ವಂಚನೆ ಆರೋಪದ ವರದಿ ಬಂದಿರುವುದಿಲ್ಲ. 1999-2000ನೇ ಸಾಲಿನಲ್ಲಿ ಮೂಡಗೋಡಿನ ವರದಾ ಗ್ರಾಮೀಣಾ ಬ್ಯಾಂಕಿನ ಸಹಯೋಗದೊಂದಿಗೆ ಯಾವುದೇ ಸಹಾಯಧನ ಸಾಲ ಬಿಡುಗಡೆ ಮಾಡಿರುವುದಿಲ್ಲ.

ಪರಿಶಿಷ್ಟ ವರ್ಗದವರಿಗೆ ಮೀಸಲಾತಿಯಲ್ಲಿ ಅನ್ಯಾಯ

826 (344) ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?